### ರಾಷ್ಟ್ರೀಯ ಯುವ ದಿನಾಚರಣೆಯಲ್ಲಿ ನ್ಯಾಯಾಧೀಶರಾದ ಈಶಪ್ಪ ಭೂತೆ ಅಭಿಮತ

# ಯುವಕರು ದುಶ್ಚಟಗಳಿಗೆ ಬಲಿಯಾಗದೆ ಉತ್ತಮ ವ್ಯಕ್ತಿಗಳಾಗಿ ಬೆಳೆಯಿರಿ

ಹಾವೇರಿ

ಯುವ ಜನರು ದುಶ್ಚಟಗಳಿಗೆ ಬಲಿಯಾಗದೆ ಉತ್ತಮ ವಿದ್ಯಾರ್ಜನೆ ಹೊಂದಿ ಸಮಾಜದಲ್ಲಿ ಉನ್ನತ ವ್ಯಕ್ತಿಗಳಾಗುವ ನಿಟ್ಟಿನಲ್ಲಿ ಆಲೋಚನೆಗಳನ್ನು ಬೆಳೆಸಿಕೊಳ್ಳಬೇಕು ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಈಶಪ್ಪಾ ಕೆ.ಭೂತೆ ಅವರು ಹೇಳಿದರು.

ನಗರದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ, ಅಭಿಯೋಜನೆ ಇಲಾಖೆ, ಜಿಲ್ಲಾ ಪೊಲೀಸ್ ಇಲಾಖೆ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಜರುಗದಿ ರಾಷ್ಟ್ರೀಯ ಯುವ ದಿನಾಚರಣೆ ಹಾಗೂ ಮಾದಕ ಔಷಧ, ಮದ್ದು ದುರ್ಬಳಕೆಗೆ ಬಲಿಯಾದವರಿಗೆ ಕಾನೂನು ಸೇವೆಗಳ ಮತ್ತು ಮಾರಕ ಔಷಧ ವಿಪತ್ತಿನ ನಿರ್ಮೂಲನೆ ಯೋಜನೆ-2015ರ ಕುರಿತು ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯುವ ಜನರ ಬದುಕಿಗೆ ಸಮಾಜಕ್ಕೆ ಮಾರಕವಾದ ಸಿಗರೇಟು, ಅಫಿಮು, ಮದ್ದು, ಗಾಂಜಾ ಸೇವನೆ ಯಂತಹ ದುಶ್ಚಟಗಳಿಗೆ ಬಲಿಯಾಗದೆ ಉತ್ತಮ ಗುರಿಯೊಂದಿಗೆ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನವನ್ನು ಹೊಂದುವ ಗುರಿ ನಿಮ್ಮದಾಗಿರಬೇಕು. ವಿದ್ಯಾರ್ಥಿಗಳು ರಾಷ್ಟ್ರದ ಸಂಪತ್ತು. ನಮ್ಮ ರಾಷ್ಟ್ರದ ಪ್ರಗತಿಗೆ ಯುವ ಶಕ್ತಿ ಬೆಳಕೆಯಾಗಬೇಕು. ನಮ್ಮ ರಾಷ್ಟ್ರವನ್ನು ಮಾದರಿಯ ರಾಷ್ಟ್ರವೆಂದು ವಿಶ್ವಕ್ಕೆ ತೋರಿಸುವಂತಹ ವ್ಯಕ್ತಿಗಳಾಗಿ ಬೆಳೆಯಬೇಕು ಎಂದು ಹೇಳಿದರು.

ಸ್ವಾಮಿ ವಿವೇಕಾನಂದರು ಯುವಕರನ್ನು ಕೇವಲ ಒಬ್ಬ ವ್ಯಕ್ತಿಯಾಗಿ ಕಾಣದೇ ಈ ದೇಶದ ಶಕ್ತಿ ಎಂದು ಭಾವಿಸಿದ್ದರು. ಯುವಕರು ಸ್ವಾಮಿ ವಿವೇಕಾನಂದರ ವಿಚಾಧಾರೆಗಳನ್ನು ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಜೀವನದಲ್ಲಿ ಉನ್ನತ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ ಅವರು ಮಾತನಾಡಿ, ಸ್ವಾಮಿ ವಿವೇಕಾನಂದರ 155ನೇ ಜನ್ಮದಿನಾವದ ಇಂದು ಯುವ ಸಮೂಹ ಅವರ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು. ಪ್ರಕರ ವಿಚಾರವಾದಿಯಾದ ಅವರು ಆಧ್ಯಾತ್ಮದಲ್ಲಿ ರಾಷ್ಟ್ರಿಯವಾದವನ್ನು ಬೆರಸಿ ದೇಶದ ಭವಿಷ್ಯತ್ತನ್ನು ನಿರ್ಧರಿಸಿದ ದಾರ್ಶನಿಕರು. ಈ ದೇಶಕ್ಕೆ ಅವಶ್ಯವಿರುವುದು ಹಿಂದುವಿನ ಆತ್ಮ ಅಂದರೆ ಇಲ್ಲಿರುವ ಉಪನಿಷತ್ತು, ವೇದ, ಜ್ಞಾನ ಸಂಪತ್ತು ಮುಸ್ಲಿಂ ದೇಹ ಅಂದರೆ ವ್ಯಾವಹಾರಿಕ ಕೌಶಲ್ಯ ಮತ್ತು ದೈಹಿಕ ಸಾಮರ್ಥ್ಯ ಇವು ದೇಶದ ಭವಿಷ್ಯತ್ತನ್ನು ನಿರ್ಧರಿಸುತ್ತದೆ ಎಂದು ಹೇಳಿದರು. ವಿವೇಕರ ಆದರ್ಶಗಳು, ಚಿಂತನೆಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ವಿದ್ಯಾರ್ಥಿ ಯುವ ಸಮೂಹ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಯುವ ಸಮೂಹ ಕುಡಿತಕ್ಕೆ ಬಲಿಯಾಯಾಗಿ ಮಾದಕ ವಸ್ತುಗಳ ವ್ಯಸನಿಗಳಾಗುತ್ತಿರುವ ಸಂಖ್ಯೆ ಹೆಚ್ಚಾಗುತ್ತಿದೆ. ಹಾವೇರಿಯಂತಹ ಚಿಕ್ಕ ಪಟ್ಟಣಗಳಲ್ಲಿ ಕೊರೆಸ್ ಎಂಬ ಟಾನಿಕ್ ಮತ್ತು ಮಾತ್ರೆಗಳನ್ನು ಸೇವಿಸಿ ನಶೆಯಲ್ಲಿ ತಾವು ಏನು ಮಾಡುತ್ತಿದ್ದೇವೆ ಎಂಬ ಅರೀವಿಲ್ಲದೆ ಪ್ರಚೋದನೆಗೊಳಗಾಗಿ ಕಾನೂನುಬಾಹೀರ ಚಟುವಟಿಕೆಯಲ್ಲಿ ತೊಡಗಿ ಬಾಲಾಪರಾಧಿಯಾಗಿ ಜೈಲುಪಾಲಾಗುತ್ತಿರುವುದು ವಿಷಾಧಕರ ಸಂಗತಿಯಾಗಿದೆ ಎಂದರು.

ಮದ್ದು ಬರುವ ವಸ್ತುಗಳ ಸೇವನೆ ನಮ್ಮ ಬದುಕನ್ನ ಹಾಳು ಮಾಡುವುದಲ್ಲದೇ ಸಮಾಜವನ್ನು ಮತ್ತು ದೇಶದ ಭವಿಷ್ಯವನ್ನು ಸಹ ಹಾಳು ಮಾಡುತ್ತದೆ. ಹಾಗಾಗಿ ಈ ಮಾದಕ ವಸ್ತುಗಳ ಚಟ ಬಿಟ್ಟು ನಿರ್ಮಲವಾದ ಬದುಕನ್ನ ಕಟ್ಟಿಕೊಳ್ಳಲು ರೂಡಿಸಿಕೊಳ್ಳಿ ಎಂದರು.

ಹಿರಿಯ ಶ್ರೇಣಿಯ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳಾದ ಶ್ರೀಮತಿ ವಾಯ್.ಎಲ್.ಲಾಡಖಾನ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಮೀಕ್ಷೆಯ ಪ್ರಕಾರ ದೇಶದಲ್ಲಿ 7ಕೋಟಿ ಜನರು ಮಾದಕ ವಸ್ತುಗಳ ದುರುಪಯೋಗದಲ್ಲಿ ಭಾಗಿಯಾಗಿದ್ದಾರೆ. ಅಂದರೆ ರಾಷ್ಟ್ರದ ಜನಸಂಖ್ಯೆಯಲ್ಲಿ 17% ಜನರು ಮಾದಕ ವ್ಯಸನಗಳಿಗೆ ಬಲಿಯಾಗಿದ್ದಾರೆ.

ದುಶ್ಚಟಗಳಿಂದ ವಿದ್ಯಾರ್ಥಿ ಸಮೂಹ ದೂರವಿರಬೇಕು. ಮಾದಕ ವಸ್ತು ಮತ್ತು ಮದ್ದು ದುರ್ಬಳಕೆಗೆ ಬಲಿಯಾದವರಿಗೆ ಕಾನೂನು ಸೇವಾ ಪ್ರಾಧಿಕಾರ ಎಲ್ಲ ರೀತಿಯ ಕಾನೂನಿನ ನೆರವನ್ನು ಉಚಿತವಾಗಿ ಒದಗಿಸಲಿದೆ. ಈ ಕುರಿತಂತೆ ಜಾಗೃತಿ ಮೂಡಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಾದ ಶ್ರೀಮತಿ ಸುನಂದಾ ಮಡಿವಾಳರ, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷರಾದ ಅಶೋಕ ನೀರಲಗಿ, ಕಾರ್ಯದರ್ಶಿಗಳಾದ ಡಿ.ಎನ್.ನಾಯ್ಡು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕರಾದ ಬಿ.ಆರ್.ರಂಗನಾಥ್, ಕಾರಾಗೃಹದ ಅಧೀಕ್ಷಕರಾದ ಟಿ.ಬಿ.ಭಜಂತ್ರಿ ಅವರು ಉಪಸ್ಥಿತರಿದ್ದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ಯಾನಲ್ ನ್ಯಾಯವಾದಿಗಳಾದ ಎಸ್.ಎಫ್. ವಾರ್ತಿ ಹಾಗೂ ಎಸ್.ಎಂ.ಹೊಸಮನಿ ಮತ್ತು ನಗರ ಪೊಲೀಸ್ ಠಾಣೆ ಸಹಾಯಕ ನಿರೀಕ್ಷಕರಾದ ಎಸ್.ಡಿ.ಸಾಗರ ಅವರು ವಿಶೇಷ ಉಪನ್ಯಾಸ ನೀಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಶಿವಣ್ಣ ಸ್ವಾಗತಿಸಿದರು. ನಾಗರಾಜ ನಡುವಿನಮತ ವಂದಿಸಿದರು.

## ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮನವಿ

ಹಾವೇರಿ

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ(ಸಿಐಟಿಯು) ಬ್ಯಾಡಗಿ ತಾಲೂಕ ಸಮಿತಿ ವತಿಯಿಂದ ಹಾವೇರಿ ಲೋಕಸಭಾ ಕ್ಷೇತ್ರದ ಸಂಸದರಾದ ಶಿವಕುಮಾರ ಉದಾಸಿಯವರಿಗೆ ನಗರದ ಸಂಸದರ ಕಛೇರಿಯಲ್ಲಿ ಆಪ್ತ ಕಾರ್ಯದರ್ಶಿಯಾದ ರಾಜು ಪೇಟಕರ ಮೂಲಕ ಮನವಿ ಸಲ್ಲಿಸಲಾಯಿತು.

ಕೇಂದ್ರ ಸರ್ಕಾರ ಐಸಿಡಿಎಸ್ ಯೋಜನೆಯನ್ನು ಬಲಪಡಿಸಬೇಕು ಹಾಗೂ ಅಂಗನವಾಡಿ ನೌಕರರಿಗೆ ಗೌರವ ಧನ ಹೆಚ್ಚಳ ಮಾಡಬೇಕು,ಇತ್ತೀಚಿಗೆ ಅಂಚೆ ಮೂಲಕ ಆಹಾರ ಪಟ್ಟಣವನ್ನು ಕಳುಹಿಸಲು ನಿರ್ಧರಿಸಿದ್ದು ಈ ನಿರ್ಧಾರವನ್ನು ಕೈಬಿಡಬೇಕು.ಮತ್ತೊಂದು ಕಡೆ ಕೇಂದ್ರದ ಅನುದಾನ 75% ರಷ್ಟು ಪಾಲನ್ನು ಕಡಿತಮಾಡಲು ಮುಂದಾಗಿದೆ. ಕೇಂದ್ರ ಸರ್ಕಾರದ ಈ ಧೋರಣೆಯನ್ನು ವಿರೋಧಿಸಿ ಎಲ್ಲ ಲೋಕ ಸಭಾ ಸದಸ್ಯರುಗಳಿಗೆ ಮನವಿ ಸಲ್ಲಿಸುತ್ತಿದ್ದೇವೆ. ತಾವುಗಳು ಕೂಡಾ ಲೋಕಸಭೆಯಲ್ಲಿ ಹಾಗೂ ಕೇಂದ್ರ ಮಂತ್ರಿಗಳಾದ ಮನೇಕಾ ಗಾಂಧಿಯವರಿಗೆ ನಮ್ಮ ಬೇಡಿಕೆಗಳ ಬಗ್ಗೆ ಚರ್ಚಿಸಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ.

ಈ ಎಲ್ಲ ಬೇಡಿಕೆಗಳಿಗೆ ಆಗ್ರಹಿಸಿ ಜನೇವರಿ 17 ರಂದು ಎಲ್ಲ ಕೇಂದ್ರ ಸಚಿವರ ಮನೆಯ ಎದುರು ಧರಣೆ ನಡೆಸಲು ಅಂಗನವಾಡಿ ನೌಕರರು ತೀರ್ಮಾನಿಸಿದ್ದು, ಅಂದು ಶಿರಶಿಯಲ್ಲಿ ಸಚಿವರಾದ ಅನಂತಕುಮಾರ ಹೆಗಡೆ ಮನೆ ಎದುರು ಧರಣೆ ನಡೆಯುತ್ತಿದ್ದು ಅಂಗನವಾಡಿ ನೌಕರರು ಈ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸಂಸದರು ನಮ್ಮೆಲ್ಲಾ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಬೇಕೆಂದು ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಬ್ಯಾಡಗಿ ತಾಲೂಕಾಧ್ಯಕ್ಷರಾದ ಶಶಿಕಲಾ ಪುರಾಣಿಕಮಠ.ಪ್ರಧಾನ ಕಾರ್ಯದರ್ಶಿ ಹೇಮಾವತಿ ಎಲಿ.ಸಿಐಟಿಯು ಜಿಲ್ಲಾಸಂಚಾಲಕರಾದ ವಿನಾಯಕ ಕುರುಬರ. ತಾಲೂಕ ಸಂಚಾಲಕರಾದ ಮಹಾಂತೇಶ ಎಲಿ.ಪದಾಧಿಕಾರಿಗಳಾದ ಲೀಲಾವತಿ ಸಾತಣ್ಣನವರ.ಲೀಲಾ ಆಲದಕಟ್ಟಿ.ಗಿರಿಜಮ್ಮ ಕಡಕೋಳ ಇದ್ದರು.

## ಶೇಂಗಾ-ಜೋಳ ಖರೀದಿ ಕೇಂದ್ರ ತೆರೆಯಲು ಮನವಿ



ಹಾವೇರಿ

ಜಿಲ್ಲೆಯು ಕೃಷಿ ಪ್ರಧಾನವಾಗಿ ಅನ್ನದಾತರಿಗೆ ಜಿಲ್ಲಾದ್ಯಾಂತಹ ಬೆಂಬಲ ಬೆಲೆ ನೀಡಿ ಶೇಂಗಾ ಹಾಗೂ ಗೋವಿನಜೋಳ ಖರೀದಿ ಕೇಂದ್ರ ಪ್ರಾರಂಭಿಸಬೇಕೆಂದು ಜಿಲ್ಲಾ ಆಡಳಿತಕ್ಕೆ ಜೆಡಿಎಸ್ ಪಕ್ಷದ ಜಿಲ್ಲಾ ಘಟಕದ ವತಿಯಿಂದ ಮನವಿ ಸಲ್ಲಿಸಲಾಯಿತು.

ಜನೇವರಿ 17 ರೊಳಗಾಗಿ ಖರೀದಿ ಕೇಂದ್ರ ಪ್ರಾರಂಭಿಸಬೇಕು ಇಲ್ಲವಾದರೆ ಜಿಲ್ಲಾಡಳಿತ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ಕೈಗೊಳ್ಳಲಾಗುವುದೆಂದು ಮನವಿ ಪತ್ರದಲ್ಲಿ ಒತ್ತಾಯಿಸಲಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಪ್ರಮುಖರಾದ ಜೆ.ಡಿ.ಎಸ್. ಜಿಲ್ಲಾ ಅಧ್ಯಕ್ಷರಾದ ಅಶೋಕ, ಬೇವಿನಮರ ರಾಜ್ಯ ಪ್ರಧಾನಕಾರ್ಯದರ್ಶಿಗಳಾದ ಸಂಜಯ ಡಾಂಗೆ, ಜಿಲ್ಲಾ ಕಾರ್ಯಧ್ಯಕ್ಷ ಉಮೇಶ ತಳವಾರ, ಮಹಂತೇಶ ಬೇವಿನಹಿಂಡಿ, ಅಲ್ತಾಫ್ ನದಾಫ, ಶೇಕಪ್ಪ ಹಿರೇತನದ, ಮಂಜುನಾಥ ಕನ್ನಾನಾಯ್ಕರ, ಅಕ್ಬರ್ ಶೇಖ್, ಯುವ ಘಟಕದಜಿಲ್ಲಾಧ್ಯಕ್ಷ ಅಣ್ಣಯ್ಯ ಚಾವಡಿ ಮುಂತಾದವರು ಭಾಗವಹಿಸಿದ್ದರು.

## ಸಂಸ್ಕೃತಿಯನ್ನು ಎತ್ತಿ ಹಿಡಿದ ಜ್ಞಾನ ಮೂರ್ತಿ ಸ್ವಾಮಿ ವಿವೇಕಾನಂದ

ಸಿರಿಗೇರಿ

ಸ್ವಾಮಿ ವಿವೇಕಾನಂದ ಜಯಂತಿ ನಿಮಿತ್ತ ಇಲ್ಲಿನ ಸ್ವಾಮಿ ವಿವೇಕಾನಂದ ಪ್ರೌಢ ಶಾಲೆಯಿಂದ ಜಾಥಾ ಕಾರ್ಯಕ್ರಮವನ್ನು ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು.

ಪ್ರಾರಂಭದಲ್ಲಿ ಶಾಲೆಯಿಂದ ಶಿಕ್ಷಕರು ಹಾಗೂ ವಿಧ್ಯಾರ್ಥಿಗಳು ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಿ ಸಮಾವೇಶಗೊಂಡರು.ಈ ಸಂಧರ್ಭದಲ್ಲಿ ಮಾತನಾಡಿದ ಶಾಲಾ ಮುಖ್ಯಗುರು ಎನ್.ಪಂಪಾಪತಿ ಮಾತನಾಡಿ ಏಳಿ..ಎದ್ದೇಳಿ.. ಗುರಿ ಮುಟ್ಟುವವರೆಗೂ ನಿಲ್ಲದಿರಿ!!ಎಂದು ಯುವಕರನ್ನು ಹುರಿದುಂಬಿಸಿ ಜ್ಞಾನದ ಜ್ಯೋತಿಯನ್ನು ಬೆಳಗಿಸಿದ ಕೀರ್ತಿ ವಿವೇಕಾನಂದರಿಗೆ ಸಲ್ಲುತ್ತದೆ.ಅಮೇರಿಕಾ ದೇಶದ ಚಿಕಾಗೋ ನಗರದಲ್ಲಿ ನಡೆದ ಹಿಂದೂ ಸಮ್ಮೇಳನದಲ್ಲಿ ಸಹೋದರ..ಸಹೋದರಿಯರೇ!! ಎಂಬ ಮಾತಿನ ಮುನ್ನುಡಿ ಹಿಂದೂ ಧರ್ಮದಲ್ಲಿರುವ ಸಂಸ್ಕೃತಿಯನ್ನು ಎತ್ತಿ ಹಿಡಿಯಿತು.ಇಂತಹಾ ಜ್ಞಾನ ಮೂರ್ತಿಗಳ ಆದರ್ಶ ಹಾಗೂ ಪ್ರಾಮಾಣಿಕತೆಯ ಗುಣಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.ಕಾರ್ಯಕ್ರಮದಲ್ಲಿ ವಿಧ್ಯಾರ್ಥಿ,ವಿಧ್ಯಾರ್ಥಿನಿಯರು, ಶಾಲಾ ಶಿಕ್ಷಕರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ತನಿಖೆ ನಡೆಸಿ ನ್ಯಾಯ ಒದಗಿಸುವೆ: ಶಾಸಕ

ಹಾನಗಲ್ಲ

ತಾಲೂಕಿನ ಆಡೂರಿನ ಮಾತಂಗೇಶ್ವರಿ ದೇವಸ್ಥಾನದ ಜಾಗೆಯಲ್ಲಿ ಅತಿಕ್ರಮಣ ಮಾಡಲಾಗಿದೆ ಎಂದು ಆರೋಪಿಸಿ ಹಾನಗಲ್ಲ ತಹಶೀಲ್ದಾರ ಕಛೇರಿ ಎದುರು ಧರಣೆಗೆ ಕುಳಿತ ಪ್ರತಿಭಟನಾಕಾರರನ್ನು ಭೇಟಿ ಮಾಡಿದ ಶಾಸಕ ಮನೋಹರ ತಹಶೀಲ್ದಾರ, ಈ ಪ್ರಕರಣವನ್ನು ತನಿಖೆ ನಡೆಸಿ ನ್ಯಾಯ ಒದಗಿಸಿಕೊಡಲಾಗುವುದು ಎಂದು ಭರವಸೆ ನೀಡಿದರು.

ಶುಕ್ರವಾರ ಹಾನಗಲ್ಲಿನಲ್ಲಿ ಧರಣೆ ಸ್ಥಳಕ್ಕೆ ಭೇಟಿ ನೀಡಿ ಧರಣೆ ನಿರತರ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಕಾನೂನಿನ ಮುಂದೆ ಎಲ್ಲರೂ ಸಮಾನರು. ಕಾನೂನು ಉಲ್ಲಂಘಿಸಿದವರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲು ಯಾರಿಗೂ ಹೆದರ ಬೇಕಾಗಿಲ್ಲ, ಈ ಪ್ರಕರಣವನ್ನು ಹಾವೇರಿಯ ಜಿಪಂ ಇಲಾಖೆಯ ಸಿಇಓ ಮೂಲಕ ತನಿಖೆ ನಡೆಸಿ ನ್ಯಾಯ ಒದಗಿಸಿ ಕೊಡಲಾಗುವುದು. ನಮ್ಮ ಸರಕಾರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ಸಮುದಾಯಕ್ಕೆ ಅತಿ ಹೆಚ್ಚು ಸೌಲಭ್ಯ ಒದಗಿಸಿದ ಸಂದರ್ಭದಲ್ಲಿ ನಾವು ಈ ಜನಾಂಗಕ್ಕೆ ಯಾವುದೇ ಅನ್ಯಾಯವಾಗಲು ಬಿಡುವುದಿಲ್ಲ, ಧರಣೆ ಹಿಂದೆ ಪಡೆದು ತನಿಖೆಗೆ ಸಹಕರಿಸಬೇಕು ಎಂದರು.

ಧರಣೆ ನಿರತರು ನ್ಯಾಯ ದೊರಕುವವರೆಗೆ ಧರಣೆಯಿಂದ ಹಿಂದೆ ಸರಿಯುವುದಿಲ್ಲ, ಸಿಇಓ ಧರಣೆ ಸ್ಥಳಕ್ಕೆ ಬಂದು ನ್ಯಾಯಯುತ ಆದೇಶ ನೀಡುವವರೆಗೂ ಮುಂದುವರಿಯುತ್ತದೆ ಎಂದು ಸ್ಪಷ್ಟ ಪಡಿಸಿದರು.

ದಾನಪ್ಪ ಗಂಟೇರ, ಖಾದರಮೊಹಿದ್ದೀನ ಶೇಖ, ಪುಟ್ಟಪ್ಪ ವಾಸನದ, ಹಾಶಂಪೀರ ಇನಾಮದಾರ ಮುಂತಾದವರು ಈ ಸಂದರ್ಭದಲ್ಲಿದ್ದರು.

## ಜ. 19-20 ಕ್ರೀಡಾಕೂಟ ಸಾಂಸ್ಕೃತಿಕ ಸ್ಪರ್ಧೆಗಳು

ಹಾವೇರಿ

ರಾಜ್ಯ ಸರ್ಕಾರಿ ನೌಕರರ ಸಂಘ ಹಾವೇರಿ ಜಿಲ್ಲಾ ಘಟಕ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಹಾವೇರಿ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಜನವರಿ 19 ಮತ್ತು 20 ರಂದು ನಗರದ ಹೊಸಮನಿ ಸಿದ್ದಪ್ಪ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ನಾಲ್ಕು ವರ್ಗಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, 45 ವರ್ಷದೊಳಗಿನ ಪುರುಷರ ವಿಭಾಗದಲ್ಲಿ ಗುಂಪು ಸ್ಪರ್ಧೆಗಳು, ಈಜು, ಅಥ್ಲೆಟಿಕ್ಸ್, 45 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಈಜು, ಅಥ್ಲೆಟಿಕ್ಸ್, ಕುಸ್ತಿ, ವೈಟ್ ಲಿಫ್ಟಿಂಗ್, ಪವರ್ ಲಿಫ್ಟಿಂಗ್, ದೇಹದಾರ್ಢ್ಯ ಸ್ಪರ್ಧೆ ಏರ್ಪಡಿಸಲಾಗಿದೆ.

ಮಹಿಳೆಯರ ವಿಭಾಗದಲ್ಲಿ 45 ವರ್ಷದೊಳಗಿನವರಿಗೆ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಕೇರಂ, ಟೆನ್ನಿಕಾಯಿಟ್, ಥ್ರೋಬಾಲ್, ಈಜು, ಅಥ್ಲೆಟಿಕ್ಸ್ ಹಾಗೂ 40 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಟೆನ್ನಿಕಾಯಿಟ್, ಈಜು, ಅಥ್ಲೆಟಿಕ್ಸ್ ಕ್ರೀಡೆಗಳನ್ನು ಆಯೋಜಿಸಲಾಗಿದೆ.

ಸಂಗೀತ ಮತ್ತು ನೃತ್ಯ ಸ್ಪರ್ಧೆಗಳಲ್ಲಿ ಪುರುಷ ಹಾಗೂ ಮಹಿಳೆಯರು ಒಟ್ಟಿಗೆ ಭಾಗವಹಿಸಬಹುದು.

# ಸಿಎಂ ಹೇಳಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ

ಹಾವೇರಿ

ರಾಜ್ಯ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ ಆರ್.ಎಸ್.ಎಸ್, ಬಿಜೆಪಿ, ಭಜರಂಗದಳ, ಶ್ರೀರಾಮಸೇನೆಯ ಸಂಘಟನೆಗಳ ಕಾರ್ಯಕರ್ತರನ್ನು ಉಗ್ರಗಾಮಿಗಳೆಂದು ಹೇಳಿರುವ ಹೇಳಿಕೆಯನ್ನು ಖಂಡಿಸಿ ಬಿಜೆಪಿ ಜಿಲ್ಲಾ ಕಾರ್ಯಾಲಯದಿಂದ ಪಾದಯಾತ್ರೆಯ ಮೂಲಕ ಜಿಲ್ಲಾ ಕಾಂಗ್ರೆಸ ಕಾರ್ಯಾಲಯ ಎದುರು ತೆರಳಿ ಪ್ರತಿಭಟನೆ ಮಾಡಲಾಯಿತು.

ಪಾದಯಾತ್ರೆಯ ಪ್ರತಿಭನೆಯ ಸಂದರ್ಭದಲ್ಲಿ ಆರಕ್ಷಕ ಇಲಾಖೆಯವರು ಕಾಂಗ್ರೆಸ ಕಾರ್ಯಾಲಯಕ್ಕೆ ಹೊಗುವ ಮುನ್ನ ಪೂರ್ವಯೋಜಿತ ಹಾಗೂ ಒತ್ತಾಯ ಪೂರ್ವಕವಾಗಿ ಬಿಜೆಪಿ ಕಾರ್ಯಕರ್ತರು ಬಂದಿಸಲು ಯತ್ನಿಸುವ ಸಂದರ್ಭದಲ್ಲಿ ಕಾಂಗ್ರೆಸ ಕಾರ್ಯಾಲಯ ಎದುರು ಇರುವ ಪಿ.ಬಿ. ರಸ್ತೆಯಲ್ಲಿ ಕುಳಿತು ಪ್ರತಿಭಟನೆಯನ್ನು ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಶಿವರಾಜ ಸಜ್ಜನರ ಮಾತನಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದೂ ವಿರೋಧಿಯಾಗಿದ್ದು. ರಾಜ್ಯದಲ್ಲಿ ಹಿಂದೂಗಳ ಮತ್ತು ಆರ್.ಎಸ್.ಎಸ್, ಬಿಜೆಪಿ ಕಾರ್ಯಕರ್ತರ ಕೊಲೆಯಾಗಿದ್ದು ಇಲ್ಲಿಯವರಿಗೂ ಕಾನೂನಿನಡಿಯಲ್ಲಿ ಅಪಾರಧಿಗಳನ್ನು ಬಂದಿಸದೆ, ರಾಜ್ಯದಲ್ಲಿ ಜನಸಾಮಾನ್ಯರು ಭಯಭೀತರಾಗಿ ಕಾಂಗ್ರೆಸ ಸರ್ಕಾರದ ಅರಾಜಕತೆಯಿಂದ ಭಯದ ವಾತಾವರಣ ಸೃಷ್ಟಿಯಾಗಿದೆ. ಬಿಜೆಪಿ 19 ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದ್ದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ನೀಡಿರುವ ರಾಷ್ಟ್ರಪ್ರೇಮ ವಾಗಿದೆ, ಆ ನಿಟ್ಟಿನಲ್ಲಿ ರಾಜ್ಯ ಕಾಂಗ್ರೆಸ ಸರ್ಕಾರ ಮುಂಬರುವ ಚುನಾವಣೆಯ ಸೋಲಿನ ಭೀತಿಯಿಂದ ಕಾಂಗ್ರೆಸ ಕಾರ್ಯಾದ್ಯಕ್ಷರಾದ ದಿನೇಶ ಗುಂಡುರಾವ, ಗೃಹಮಂತ್ರಿ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಸಚಿವ ಸಂಪುಟ ಬಾಯಿಗೆ ಬಂದಂತೆ ಮಾತನಾಡುವದರ ಮೂಲಕ ದೇಶ ದ್ರೋಹ ಕೆಲಸದಲ್ಲಿ ತೊಡಗಿರುವ ಬಯೋತ್ಪಾದನೆ ಸಂಘಟನೆಗಳಾದ ಪಿ.ಎಫ್.ಐ, ಎಸ್.ಡಿ.ಪಿ.ಐ ಸಂಘಟನೆಗಳ ಮೂಲಕ ರಾಜ್ಯದಲ್ಲಿ ಕೋಮುಗಲಬೆ ಎಬ್ಬಿಸುತ್ತಿದೆ, ಇದಕ್ಕೆ ರಾಜ್ಯದ ಜನರು ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ ಪಕ್ಷವನ್ನು ತಿರಸ್ಕರಿಸುವ ಮೂಲಕ ಕಾಂಗ್ರೆಸ ಮುಕ್ತ ಭಾರತ ಮಾಡಲಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದರಾಜ ಕಲಕೋಟಿ ಮುಖಂಡರಾದ ನೆಹರು ಓಲೇಕಾರ, ಸುರೇಶಗೌಡ ಪಾಟೀಲ, ಲಿಂಗರಾಜ ಚಪ್ಪರದಳ್ಳಿ, ಸುರೇಶ ಹೊಸಮನಿ, ವಿರೂಪಾಕ್ಷಪ್ಪ ಬಳ್ಳಾರಿ, ವಿರೂಪಾಕ್ಷಪ್ಪ ಕಡ್ಲಿ, ಶಿವರಾಜ ಹರಿಜನ, ನಿರಜಂನ ಹೇರೂರ, ಮುತ್ತಯ್ಯ ಕಿತ್ತೂರಮಠ, ನಂಜುಡೇಶ ಕಳ್ಳೇರ, ಪ್ರಭು ಹಿಟ್ನಳ್ಳಿ, ಈರಪ್ಪ ಲಮಾಣಿ, ಪರಮೇಶ್ವರ ಮ್ಯಾಗಳಮನಿ, ಡಾ. ಮಲ್ಲೇಶಪ್ಪ ಹರಿಜನ, ಶ್ರೀಪಾಧಸ್ವಾಮಿ ಬೇಟಗೇರಿ, ಮಾದೇವಪ್ಪ ನಾಗಮ್ಮನವರ, ಡಿ.ಎಸ್. ಮಾಳಗಿ, ಶಿವಬಸಪ್ಪ ವನಳ್ಳಿ, ವೆಂಕಟೇಶ ದೈವಜ್ಞ, ಮಂಜುನಾಥ ಮಡಿವಾಳರ, ಲತಾ ಬಡ್ನಿಮಠ, ರತ್ನಮ್ಮ ಗುಡ್ಡದಮತ್ತಿಹಳ್ಳಿ, ಚನ್ನಮ್ಮ ಪಾಟೀಲ, ಭಾರತಿ ಜಂಬಗಿ, ಪಾರ್ವತಿ ಪಾಟೀಲ, ಸುಮಂಗಲಾ ಚನ್ನವಿರಗೌಡ, ವನಿತಾ, ಲಲಿತಾ ಗುಂಡೇನಹಳ್ಳಿ, ಕರಬಸಪ್ಪ ಹಳದೂರ, ಬಸವರಾಜ ಡೊಂಕಣ್ಣನವರ, ಶಾಂತಪ್ಪ ಕಲಕೋಟಿ, ಗಿರೀಶ ಶಟ್ಟರ, ಹುಲಗೇಶ ಬಜಂತ್ರಿ, ಹನುಮಂತ ದಾಸರ, ಶಂಕ್ರಗೌಡ ಹಟ್ಟೆರ, ಸತೀಶ ಹಾವೇರಿ, ವಿರೇಂದ್ರ ಶೆಟ್ಟರ, ಗದಗೇಶ ಕುಲಕರ್ಣಿ, ರುದ್ರೇಶ ಚಿನ್ನಣ್ಣನವರ, ಶಿವಬಸವ ವನಳ್ಳಿ, ನಾಗರಾಜ ಹರಗೋಲ, ಶಿವನಾಂದ ನಾಗಮ್ಮನವರ, ಮಾರುತಿ ಅಸುಂಡಿ, ಪ್ರಕಾಶ ಪತ್ತಾರ, ಮಂಜುನಾಥ ತಾಂಡೂರ ಮತ್ತು ಪಕ್ಷದ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

# ಲಾರಿ ಡಿಕ್ಕಿ :ಕೂಲಿ ಕಾರ್ಮಿಕ ಮಹಿಳೆ ಸಾವು

## ಆಕ್ರೋಶಗೊಂಡ ವಾಲ್ಮೀಕಿ ಸಂಘದ ಜನರಿಂದ ಕಲ್ಲು ತೂರಾಟ

ಬ್ಯಾಡಗಿ

ಚಲಿಸುತ್ತಿದ್ದ ಲಾರಿಯೊಂದು ಕೂಲಿ ಕಾರ್ಮಿಕ ಮಹಿಳೆಯೊಬ್ಬಳಿಗೆ ಢಿಕ್ಕಿ ಹೊಡೆದು ಸ್ಥಳದಲ್ಲೇ ಸಾವನ್ನಪ್ಪಿರುವ ಸುದ್ದಿ ಹರಡುತ್ತಿದ್ದಂತೆ ಬೀದಿಗಿಳಿದು ಕಲ್ಲು ತೂರಾಟ ನಡೆಸಿದ ವಾಲ್ಮೀಕಿ ಸಂಘದ ಜನರು, ಲಾರಿಯನ್ನು ಜಖಂಗೊಳಿಸಿದರು. ಬಳಿಕ ಪಟ್ಟಣದ ಮುಖ್ಯರಸ್ತೆಯಲ್ಲಿ ಎಲ್ಲೆಂದರಲ್ಲಿ ಕಲ್ಲುಗಳನ್ನೆಸೆದು ವಾಹನ ಸಂಚಾರ ವ್ಯಾಪಾರ ವಹಿವಾಟು ಸ್ಥಗಿತಗೊಳಿಸಿದ ಹಿನ್ನೆಲೆಯಲ್ಲಿ ಕೆಲಕಾಲ ಅಘೋಷಿತ ಕರ್ಫ್ಯೂವಿನಂತೆ ಕಂಡು ಬಂದಿತು.

ಪಟ್ಟಣದ ವಾಲ್ಮೀಕಿ ಸಂಘದ ನಿವಾಸಿ ಶಾಂತಮ್ಮ ಬೂದಗುಂಪಿ (ಬಾಣಾಪುರ) (40) ಎಂಬ ಕೂಲಿಕಾರ್ಮಿಕ ಮಹಿಳೆಯೊಬ್ಬಳು, ಅಂಚೆ ಕಛೇರಿಯಿಂದ ಹೊರ ಬಂದು ಮನೆಗೆ ತೆರಳುತ್ತಿರುವ ಸಂದರ್ಭದಲ್ಲಿ ಎದುರಿಗೆ ವೇಗವಾಗಿ ಚಲಿಸುತ್ತಿದ್ದ ಲಾರಿಯೊಂದು (ಕೆಎ-27-ಎ-8768) ಢಿಕ್ಕಿ ಸಂಭವಿಸಿದ ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ.

ಆಕ್ರೋಶಗೊಂಡ ಜನರಿಂದ ಲಾರಿ ಜಖಂ: ವಾಲ್ಮೀಕಿ ಸಂಘದಲ್ಲಿ ಬಹುತೇಕರು ಕೂಲಿ ಕಾರ್ಮಿಕರಿದ್ದು ಮೃತದೇಹದ ಸುತ್ತಲೂ ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿದರು. ಶಾಂತಮ್ಮನ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳುವಷ್ಟು ಆಕ್ರೋಶಭರಿತರಾದ ಅವರು, ಘಟನೆಗೆ ಕಾರಣ ಎನ್ನಲಾದ ಲಾರಿಯ ಗ್ಲಾಸುಗಳನ್ನು ಪುಡಿಗೊಳಿಸಿದರಲ್ಲದೇ ಮುಂಭಾಗವನ್ನು ಜಖಂಗೊಳಿಸಿದರು.

ಮುಖ್ಯರಸ್ತೆಯಲ್ಲೆಲ್ಲಾ ಕಲ್ಲು: ಮುಖ್ಯರಸ್ತೆ ಅಗಲೀಕರಣವಾಗದಿರುವುದೇ ಇಂದಿನ ಘಟನೆಗೆ ಕಾರಣವೆಂದು ಆರೋಪಿಸಿದ ಪ್ರತಿಭಟನಕಾರರು, ಮುಖ್ಯರಸ್ತೆ ತುಂಬೆಲ್ಲಾ ಕಲ್ಲುಗ್ಗಳನ್ನು ಎಸೆದು ವಾಹನ ಸಂಚಾರ ಸ್ಥಗಿತಗೊಳಿಸಿದರು, ಜನರ ಆಕ್ರೋಶಕ್ಕೆ ಹೆದರಿದ ವ್ಯಾಪಾರಸ್ಥರು, ತಮ್ಮ ಅಂಗಡಿ ಮುಗ್ಗಟ್ಟುಗಳನ್ನು ಸ್ವಯಂಪ್ರೇರಿತರಾಗಿ ಸ್ಥಗಿತಗೊಳಿಸಿದರು.

ಅಧಿಕಾರಿಗಳಿಗೆ ಘೇರಾವ್: ಸುದ್ದಿ ತಿಳಿದು ಸ್ಥಳಕ್ಕಾಗಮಿಸಿದ ತಹಶೀಲ್ದಾರ ಶಿವಶಂಕರ ನಾಯಕ್, ಸಿಪಿಐ ಚಿದಾನಂದ, ಪಿಎಸ್‌ಐ ರಾಘವೇಂದ್ರ ಸೇರಿದಂತೆ ಇನ್ನಿತರ ಪೊಲೀಸ್ ಸಿಬ್ಬಂದಿಗಳಿಗೆ ಘೇರಾವ್ ಹಾಕಿದರು. ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯರಸ್ತೆ ಅಗಲೀಕರಣ ಸಮಿತಿ ಅಧ್ಯಕ್ಷ ಸುರೇಶ ಛಲವಾದಿ, ಸದರಿ ರಸ್ತೆಯು ಪುರಸಭೆ ಸೇರಿದ್ದು ಕೇವಲ 10 ಟನ್ ಸಾಮರ್ಥ್ಯವನ್ನು ಹೊಂದಿದೆ, ಆದರೆ ಸುಮಾರು 40 ರಿಂದ 50 ಟನ್‌ಗೂ ಅಧಿಕ ಸಾಮರ್ಥ್ಯ ಹೊಂದಿರುವ ಭಾರಿ ವಾಹನಗಳು ಚಲಿಸುತ್ತಿದ್ದು ಇದಕ್ಕೆ ಕಡಿವಾಣ ಹಾಕುವಂತೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಇಷ್ಟಾದರೂ ಅಧಿಕಾರಿಗಳು ಜನಪ್ರತಿನಿಧಿಗಳು ಎಚ್ಚೆತ್ತುಕೊಳ್ಳದಿರುವುದು ದುರದೃಷ್ಟಕರ ಸಂಗತಿ ಎಂದರು.

ಹೇಡಿತನ ಪ್ರದರ್ಶಿಸುತ್ತಿರುವ ತಾಲೂಕಾಡಳಿತ: ಚಂದ್ರಶೇಖರ ಒಳಗುಂದಿ ಮಾತನಾಡಿ, ಪಟ್ಟಣದಲ್ಲಿನ ಹಳೇ ಮೆಣಸಿನಕಾಯಿ ಪೇಟೆ ರಸ್ತೆಯನ್ನು ಅನಧೀಕೃತವಾಗಿ ಏಕಮುಖ ಸಂಚಾರಕ್ಕೆ ಕ್ರಮ ಕೈಗೊಂಡಿದ್ದು ಎಷ್ಟರಮಟ್ಟಿಗೆ ಸರಿ..? ಎಲ್ಲ ರಸ್ತೆ ನೀತಿ ನಿಯಮಗಳನ್ನು ಗಾಳಿಗೆ ತೂರಿರುವ ತಾಲೂಕಾಡಳಿತ ಮುಖ್ಯರಸ್ತೆ ಅಗಲೀಕರಣಕ್ಕೆ ಮುಂದಾಗದೇ ಹೇಡಿತನ ಪ್ರದರ್ಶಿಸುತ್ತಿದೆ ಇಂದಿನ ಘಟನೆಗೆ ತಾಲೂಕಾಡಳಿತವೇ ಹೊಣೆ ಎಂದರು.

ಇನ್ನೆಷ್ಟು ಜೀವಗಳು ಬಲಿಯಾಗಬೇಕ್ರಿ..?: ಸದರಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದರಿಂದಲೇ ಈಗಾಗಲೇ ಲಾರಿಗಳ ಗಾಲಿಗಳ ಕೆಳಗೆ 3 ಜನರು ಸಿಲುಕಿ ಸಾವನ್ನಪ್ಪಿದ್ದಾರೆ, ಇದರಿಂದ ಶಾಲೆಗೆ ಹೋಗುವ ಮಕ್ಕಳು ಸೇರಿದಂತೆ ವಯೋವೃದ್ಧರು ಸಾವಿನ ಭಯದಲ್ಲೇ ಓಡಾಡುವಂತಾಗಿದ್ದು ಇನ್ನೆಷ್ಟು ಜೀವಗಳು ಬಲಿಯಾಗಬೇಕಾಗಿದೆ, ಕೂಡಲೇ ಮುಖ್ಯರಸ್ತೆ ಅಗಲೀಕರಣಕ್ಕೆ ಮುಂದಾಗುವ ಮೂಲಕ ಸದರಿ ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸುವಂತೆ ಆಗ್ರಹಿಸಿದರು.

ಪರದಾಡಿದ ಸಾರ್ವಜನಿಕರು: ಸಾರ್ವಜನಿಕರು ಕಲ್ಲು ತೂರಾಟ ನಡೆಯುತ್ತಿದ್ದಂತೆ ಇತ್ತ ಸಾರಿಗೆ ವಿಭಾಗವು ತನ್ನೆಲ್ಲಾ ವಾಹನಗಳ ಸಂಚಾರವನ್ನು ರದ್ದುಪಡಿಸಿತು, ಇದರಿಂದ ಪಟ್ಟಣದ ಬಸ್ ನಿಲ್ದಾಣದಲ್ಲಿದ್ದ ವಿದ್ಯಾರ್ಥಿಗಳು ಸೇರಿದಂತೆ ಪರಸ್ಥಳದಿಂದ ಆಗಮಿಸಿದ್ದ ಪ್ರಯಾಣಿಕರು, ಬಸ್ ಸಂಚಾರವಿಲ್ಲದೇ ತೊಂದರೆ ಅನುಭವಿಸಬೇಕಾಯಿತು.

ಗಣ್ಯರ ಭೇಟಿ: ಮೃತದೇಹವನ್ನಿಟ್ಟಿದ್ದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದ ಮಾಜಿ ಶಾಸಕ ಸುರೇಶಗೌಡ ಪಾಟೀಲ, ಪುರಸಭೆ ಅಧ್ಯಕ್ಷ ಬಸವರಾಜ ಛತ್ರದ, ಜಿಪಂ.ಮಾಜಿ ಸದಸ್ಯ ವಿರೂಪಾಕ್ಷಪ್ಪ ಬಳ್ಳಾರಿ ಪುರಸಭೆ ಸದಸ್ಯರಾದ ನಾರಾಯಣಪ್ಪ ಕರ್ನೂಲ, ಪ್ರಶಾಂತ ಯಾದ್ವಾಡ, ಇನ್ನಿತರರು ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಮೃತ ಸಂಬಂಧಿಕರ ಆಕ್ರಂಧನ ಮುಗಿಲನ್ನು ಮುಟ್ಟಿತು.

ಸಂಚಾರ ರದ್ದುಗೊಳಿಸಿದ ತಹಶೀಲ್ದಾರ: ಪ್ರತಿಭಟನಾಕಾರರ ಒತ್ತಡಕ್ಕೆ ಮಣಿದ ತಹಶೀಲ್ದಾರ ಶಿವಶಂಕರ ನಾಯಕ್, ಸದರಿ ರಸ್ತೆಯಲ್ಲಿ ಭಾರಿ ವಾಹನಗಳ ಸಂಚಾರ ರದ್ದುಗೊಳಿಸಿದರಲ್ಲದೇ, ರಟ್ಟಿಹಳ್ಳಿ ರಸ್ತೆ, ಕಲಾಭವನ ಬಳಸಿಕೊಂಡು ಕದರಮಂಡಲಗಿ ಕ್ರಾಸ್‌ನಿಂದ ವಾಹನಗಳು ಓಡಾಡುವಂತೆ ಸೂಚನೆ ನೀಡಿದರು.